ಓದಿ ಉಳುಮೆಗೆ ಬಂದವರು






# ಕೃಷಿ ಪ್ರಯೋಗಗಳಲ್ಲಿ ಧೀಮಂತ-ಹೇಮಂತ



ಸಂದೀಪ್ ಮಂಜುನಾಥ್
ಎಂ.ಎಸ್ಸಿ,ಕೃಷಿ, ಹುಣಸೂರು

ಐದು ವರ್ಷಗಳ ಹಿಂದೆ ತಂಗಿಯ ಮದುವೆಯ ಖರ್ಚಿಗಾಗಿ ಹೊಲದಲ್ಲಿದ್ದ ಬೃಹತ್ ಗಾತ್ರದ ಬೇವಿನ ಮರಗಳನ್ನು ಕಡಿಸಿ ಮಾರಾಟ ಮಾಡುತ್ತಾರೆ ಹೇಮಂತ್. ಅದರ ಪ್ರಾಯಶ್ಚಿತ್ತಕ್ಕಾಗಿ ಮತ್ತೆ ಮರ ಗಿಡಗಳನ್ನು ಬೆಳೆಸಲು ಹೊರಟು ಇಂದು "ಬೇರು ನ್ಯಾಚುರಲ್ಸ್" ಎಂಬ ಸಾವಯವ ಉತ್ಪನ್ನಗಳನ್ನು ಮಾರಾಟ ಮಾಡುವ ಕಂಪನಿಯನ್ನು ಸ್ಥಾಪಿಸಿರುವ ಹೇಮಂತ್ ಅವರ ಬಗ್ಗೆ ತಿಳಿಯಲು ಪ್ರಯತ್ನಿಸೋಣ

ಮೂಲತಃ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಉಯಿಗೌಡನಹಳ್ಳಿಯವರಾದ ಹೇಮಂತ್ ಅವರ ತಂದೆ ಕುಮಾರಸ್ವಾಮಿಯವರು ಮೈಸೂರಿನ ಖಾಸಗಿ ಕಂಪನಿಯೊಂದರಲ್ಲಿ ಲೆಕ್ಕಪತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಹಳ್ಳಿಯ ಬೇರುಗಳಿದ್ದರೂ ತಂದೆ ಪಟ್ಟಣದಲ್ಲಿ ನೌಕರಿಯಲ್ಲಿದ್ದರಿಂದ ಹೇಮಂತ್ ರವರು ಹುಟ್ಟಿ ಬೆಳೆದದ್ದೆಲ್ಲಾ ಮೈಸೂರಿನಲ್ಲಿ. ಬೇಸಿಗೆ ಮತ್ತು ದಸರಾ ರಜೆಯಲ್ಲಿ ಮಾತ್ರ ಹಳ್ಳಿಗೆ ಬರುತ್ತಿದ್ದರು.

ಮೈಸೂರಿನ ಪ್ರತಿಷ್ಠಿತ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಪಡೆದು ಬೆಂಗಳೂರಿನ ಈಸ್ಟ್ ವೆಸ್ಟ್ ಕಾಲೇಜಿನಲ್ಲಿ ಮಾಸ್ಟರ್ಸ್ ಇನ್ ಡಿಜಿಟಲ್ ಎಲೆಕ್ಟ್ರಾನಿಕ್ಸ್ ಸ್ನಾತಕೋತ್ತರ ಪದವಿಯನ್ನು ಪಡೆದು ಪ್ರಸ್ತುತ ಮೈಸೂರಿನ ಎಲ್ ಅಂಡ್ ಟಿ ಕಂಪನಿಯ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ತಂದೆಯವರು ಅಕಾಲ ಮರಣ ಹೊಂದಿದ ಮೇಲೆ ಮನೆಯ ಜವಾಬ್ದಾರಿ ಹೇಮಂತ್ ರವರ ಹೆಗಲೇರುತ್ತದೆ. 2016ರಲ್ಲಿ ತಂಗಿಯ ಮದುವೆ ನಿಶ್ಚಯವಾಗುತ್ತದೆ. ಪಿತ್ರಾರ್ಜಿತವಾಗಿ ಬಂದ ಹುಣಸೂರು ಸಮೀಪವಿರುವ ಆರು ಎಕರೆ ಮಳೆಯಾಶ್ರಿತ ಜಮೀನನ್ನು ಬಿಟ್ಟರೆ ಮತ್ತೇನು ಇರುವುದಿಲ್ಲ. ಮಳೆಯಾಶ್ರಿತ ಭೂಮಿಯಾದ್ದರಿಂದ ಹೇಮಂತ್ ರವರು ಸ್ವಯಂ ವ್ಯವಸಾಯ ಮಾಡುತ್ತಿರಲಿಲ್ಲ. ಗುತ್ತಿಗೆ ಆಧಾರದ ಮೇಲೆ ಇತರ ರೈತರು ತಂಬಾಕನ್ನು ಬೆಳೆಯುತ್ತಿದ್ದರು. ಜಮೀನಿನ ಬದುಗಳಲ್ಲಿ 35ಕ್ಕೂ ಹೆಚ್ಚು ದೊಡ್ಡ ಗಾತ್ರದ ಬೇವಿನ ಮರಗಳಿದ್ದವು.ಈ ಮರಗಳನ್ನು ಕಡಿಸಿ ಮಾರಾಟ ಮಾಡಿ ತಂಗಿಯ ಮದುವೆ ಮಾಡಿದರು.

ಆದರೆ ಮರ ಕಡಿಸಿದ ಪಾಪಪ್ರಜ್ಞೆ ಹೇಮಂತ್ ರವರನ್ನು ಕಾಡಲಾರಂಭಿಸಿತು. ಇದಕ್ಕೆ ಪ್ರಾಯಶ್ಚಿತ್ತವಾಗಿ ತಮ್ಮ ಜಮೀನಿನಲ್ಲಿ ಕಿರು ಅರಣ್ಯ ನಿರ್ಮಿಸಬೇಕೆಂದು ನಿಶ್ಚಯಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಅರಣ್ಯ ಕೃಷಿಯ ಬಗ್ಗೆ ತಿಳಿಯಲು ಪ್ರಾರಂಭಿಸಿದರು. ಪ್ರಮುಖವಾಗಿ ನಾಡೋಜ ನಾರಾಯಣ ರೆಡ್ಡಿ ಅವರ ಮಾತುಗಳು ಬಹಳ ಪ್ರೇರಣೆ ನೀಡಿತು. ಮೊದಲಿಗೆ ರಾಸಾಯನಿಕಗಳನ್ನು ಬಳಸಿ ತಂಬಾಕು ಬೆಳೆಯುವುದನ್ನು ನಿಲ್ಲಿಸಿದರು. ಇದೇ ವೇಳೆಗೆ ಗೋಪಾಲ್ಸ್ ತಂಡದ ವತಿಯಿಂದ ಹುಣಸೂರಿನ ಚೌಡಿಕಟ್ಟೆಯ